

ಸಹಿಸುವುದಾಗದಿದ್ದಾಗ ಒಂದು ಶುಭ ಮುಂಜಾನೆ ಯುಧಿಷ್ಠಿರ ಎದ್ದು ನಿಂತ. ತಾನು ಪ್ರಸ್ಥಾನಕ್ಕೆ ಹೊರಡುತ್ತೇನೆಂದು ಘೋಷಿಸಿದ.

ಅವನ ಬೆನ್ನಿಗೆ ಎಂದಿನಂತೆ ಉಳಿದವರೂ ಹಿಂಬಾಲಿಸಿದರು.

ಕೈಲಾಸ ಪರ್ವತದ ದಾರಿ ಹಿಡಿದ ತಂಡ ಅಲ್ಲಿಂದ ಸ್ವರ್ಗಾರೋಹಣಕ್ಕೆ ಸಜ್ಜಾಗುವುದೆಂದು ನಿರ್ಧರಿಸಿದ್ದಂತೆ, ವ್ರತವನ್ನು ಕೈಗೊಂಡು ಮುಂದಿನ ದಾರಿ ಕ್ರಮಿಸತೊಡಗಿದ್ದರು. ತುಂಬ ದಿನವೇನೂ ಬೇಕಾಗಲಿಲ್ಲ. ಮೊದಲು ದ್ರೌಪದಿ, ಅವಳ ಹಿಂದೆ ಅರ್ಜುನ, ಆಮೇಲೆ ಭೀಮ, ನಕುಲ, ಸಹದೇವ ಹೀಗೆ ಪ್ರತಿಯೊಬ್ಬರು ಒಬ್ಬರಾದ ಮೇಲೊಬ್ಬರಂತೆ ನಡೆಯುತ್ತ ನಡೆಯುತ್ತ ಬಿದ್ದು ಸತ್ತುಹೋದರು.

ಉಳಿದವನು ಯುಧಿಷ್ಠಿರ ಮಾತ್ರ.

ಧರ್ಮವನ್ನೆ ಉಸಿರಾಡಿದವನು, ಬದುಕಿನುದ್ದಕ್ಕೂ ಧರ್ಮವನ್ನು ಜೀವಕ್ಕಿಂತ ಮಿಗಿಲಾಗಿ ನಡೆಸಿಕೊಂಡು ಬಂದವನಲ್ಲವೇ. ಉಳಿದವರೆಲ್ಲರಿಗೂ ಒಂದೊಂದು ಕಾರಣಗಳಿಂದ ಸ್ವರ್ಗ ಮರೀಚಿಕೆಯಾಗಿತ್ತು. ಅವರವರ ಕರ್ಮಾನುಸಾರ ಭೂಮಿಯ ನೆಲದ ಮೇಲೆ ಅಲ್ಲಲ್ಲೆ ಕುಸಿದುಬಿದ್ದು ಸತ್ತು ಹೋಗಿದ್ದರು. ಅವನಿಗಾದರೂ ಸ್ವರ್ಗ ಸಿಗಲೇಬೇಕಿತ್ತು. ದಾರಿ ಕ್ರಮಿಸುತ್ತಾ ಸ್ವರ್ಗಕ್ಕೂ ಮೊದಲು ನರಕದ ಮೂಲಕ ಹಾಯ್ದು ಹೋಗಬೇಕಿತ್ತು. ನರಕದ ದಾರಿ ಕ್ರಮಿಸುತ್ತಿದ್ದಾಗ ಧರ್ಮರಾಯ ಹೌಹಾರಿದ್ದ. ಕಾರಣ ಭೂಮಿ ಬಿಡುವಾಗ ಹಿಂದೆ ಬಿದ್ದು ಮರಣ ಹೊಂದಿದ ಎಲ್ಲ ಸಹೋದರರೂ ದ್ರೌಪದಿಯೂ ನರಕದಲ್ಲಿದ್ದಾರೆ. ಅಲ್ಲಲ್ಲಿ ಅವನ ತಮ್ಮಂದಿರು ನರಕದಲ್ಲಿ ಜೀವ ಸವೆಸುತ್ತಿದಾರೆ. ಕರ್ಮಾನುಸಾರ ನರಕದ ನಿಯಮದಂತೆ ಶಿಕ್ಷೆಗೆ ಬಲಿಯಾಗಿ ಜೀವ ಸವೆಸುತ್ತಿದ್ದಾರೆ.

ಆತ್ಮಕ್ಕೆ ಮೋಕ್ಷವೂ ಇಲ್ಲ ಸ್ವರ್ಗವೂ ಇಲ್ಲ.

ನರಕದಲ್ಲಿ ರೌರವ ನರಕದರ್ಶನವಾಗುತ್ತಿದೆ.

ಛೇ, ಇದೇನಾಗಿ ಹೋಯಿತು ಎಂದುಕೊಂಡು ಮತ್ತೂ ದಾರಿ ಕ್ರಮಿಸಿದ ಧರ್ಮಜ ಕಡೆಗೂ ಸ್ವರ್ಗದ ಹೊಸ್ತಿಲಿಗೆ ಬಂದು ನಿಂತ. ಅದೊಂದು ಅಭೂತಪೂರ್ವ ಅನುಭವ.

ವಿವರಣೆಗೆ ನಿಲುಕದ ಅನುಭೂತಿ.

ಅಲ್ಲಿಯವರೆಗಿನ ಜೀವನದ ಸರ್ವರೀತಿಯ ಅವನ ಆಯಾಸಗಳೆಲ್ಲ ಮುಗಿದುಹೋಗಿದ್ದವು. ಮನಸ್ಸು ಮೈ ಎಲ್ಲ ಹಗುರವಾಗಿ ಗಾಳಿಯಲ್ಲಿ ಚಲಿಸತೊಡಗಿತ್ತು. ದೈಹಿಕವಾದ ಯಾವುದೇ ಆಯಾಮಗಳು ಈಗ ಅವನ ಜೀವಕ್ಕೆ ಬೇಕಿರಲಿಲ್ಲ.

ಸಂಪೂರ್ಣ ಸ್ವರ್ಗ ಪ್ರಾಪ್ತಿಯಾಗಿತ್ತು.

ಅದಕ್ಕೂ ಮಿಗಿಲಾಗಿ ಮನಸ್ಸು ಸ್ವರ್ಗದ ಹೊಸ್ತಿಲಿಗೆ ಬರುತ್ತಿದ್ದಂತೆ ಉಲ್ಲಸಿತವಾಗಿ ಗರಿಗೆದರಿತ್ತು.

ಬಾಗಿಲು ತೆರೆಯಿತು.

ಭವ್ಯವಾದ ಸ್ವರ್ಗ.

ಕಲ್ಪನೆಗೂ ಮಿಗಿಲಾದ ಅಪರೂಪ ಜೀವಸದೃಶ ಜೀವನ ಎದುರಿಗೆ ನಳನಳಿಸುತ್ತಿದೆ.

ಪ್ರವೇಶವಾಗುತ್ತಿದ್ದಂತೆ ಸ್ವರ್ಗದ ಭವ್ಯ ಸಿಂಹಾಸನದಲ್ಲಿ ಸ್ವರ್ಗಾಧಿಪತಿ ಕುಳಿತು ವಿಲಾಸವಾಗಿ ಆಳುತ್ತಿದ್ದಾನೆ.

ಒಮ್ಮೆ ಸುತ್ತೆಲ್ಲ ಕಣ್ಣಾಡಿಸಿದ ಧರ್ಮಜ.

ಅಷ್ಟೇ...

ಕಾಲು ಮುಂದಕ್ಕೆ ಚಲಿಸಲಿಲ್ಲ. ಊಹೂಂ...

ಅದು ಹೇಗೆ ಸಾಧ್ಯ...?

ಬದುಕಿನ ಅತಿ ದೊಡ್ಡ ಪ್ರಶ್ನೆ ಅವನೆದುರಿಗೆ ಧುತ್ತನೆ ಎರಗಿತ್ತು. ಅವನಿಗೆ ಸೋಜಿಗ, ಆಶ್ಚರ್ಯ. ಅದಕ್ಕೂ ಮಿಗಿಲಾಗಿ ತಳಮಳಭರಿತ ಧರ್ಮಸಂಕಟ. ಸ್ವರ್ಗದ ಅಪರೂಪದ ವಾತಾವರಣದಲ್ಲಿ ಸ್ವರ್ಗಾಧಿಪತಿಯ ಜೊತೆಗೆ ವಿಲಾಸವಾಗಿ ಭೂಮಂಡಲದ ನಕ್ಷತ್ರದಂತೆ ಹೊಳೆಯುತ್ತಾ ಅವನ ಪಕ್ಕದಲ್ಲೇ ಕುಳಿತಿದ್ದಾನೆ ಸುಯೋಧನ.

ಇದೇನು ಹೇಗೆ ಸಾಧ್ಯ?

ತನ್ನ ತಮ್ಮಂದಿರಿಗೆಲ್ಲ ನರಕ ಪ್ರಾಪ್ತಿ.

ಭೂಮಿಯ ಅಖಂಡ ಕುರುಕ್ಷೇತ್ರಕ್ಕೆ ಕಾರಣೀಕರ್ತ ದುರ್ಯೋಧನನಿಗೆ ಸ್ವರ್ಗ ಪ್ರಾಪ್ತಿಯೇ...?

ಧರ್ಮಜ ನಿಂತುಬಿಟ್ಟಿದ್ದ.

ಅವನ ಇಲ್ಲಿಯವರೆಗಿನ ಬದುಕಿನ ಗಮ್ಯದೆಡೆಗೆ ಸಾಗಿದ್ದ ನಂಬುಗೆಯಲ್ಲಿ ಬಲು ದೊಡ್ಡ ಕಂದಕ ಬಿದ್ದಿತ್ತು. ಒಳಕ್ಕೆ ಬಾರದೇ ಬಾಗಿಲ ಬಳಿಯೇ ನಿಂತುಬಿಟ್ಟಿದ್ದ ಧರ್ಮಜನಿಗೆ ಸ್ವತಃ ಸ್ವರ್ಗಾಧಿಪತಿಯೇ ಪ್ರಶ್ನಿಸಿದ್ದ.

'ಇದೇನು ಧರ್ಮಜ. ನಿಂತುಬಿಟ್ಟೆ. ನಿನ್ನ ಧರ್ಮ ಕಾರ್ಯಾರ್ಥ ಯಥಾವತ್ತಾಗಿ ನೀನು ಸ್ವರ್ಗಲೋಕ ಪ್ರಾಪ್ತಿಗೆ ಯೋಗ್ಯನಾಗಿದ್ದೀಯ. ಮೊದಲ ಸಾಲಿನಲ್ಲೇ ನಿನ್ನ ಆಸನ ಸಿದ್ಧವಿದೆ, ಸ್ವೀಕರಿಸು. ಸ್ವರ್ಗಕ್ಕೆ ಬಂದಿದ್ದೀಯ, ಸ್ವಾಗತ ನಿನಗೆ...' ಎನ್ನುತ್ತಿದ್ದರೆ,

'ಕ್ಷಮಿಸು ಸ್ವರ್ಗಾಧಿಪತಿ. ಈ ದುರ್ಯೋಧನಿಗೆ ಸ್ವರ್ಗ ಕರುಣಿಸಿ ನನ್ನ ಸಹೋದರರಿಗೆ ನರಕವನ್ನು ಕರುಣಿಸಿದ ನೀನು ಕೊಡುವ ಈ ಆಹ್ವಾನವನ್ನು ತಿರಸ್ಕರಿಸುತ್ತಿದ್ದೇನೆ. ದುರ್ಯೋಧನ ಇರುವ ಈ ಸ್ವರ್ಗ ನನಗೆ ಬೇಕಾಗಿಲ್ಲ. ನಾನು ಒಳಕ್ಕೆ ಬರಲಾರೆ...'

'ಧರ್ಮಜ. ಜಗತ್ತಿನ ಧರ್ಮಸೂಕ್ಷ್ಮ ಬಲ್ಲ ನಿನಗಿಂತ ಮಿಗಿಲಾದ ಮಾನವನಿಲ್ಲ. ಭೂಮಿಯ ಮೇಲಿನ ಮಕ್ಕಳಂತೆ ಹಟ ಮಾಡಬೇಡ...'

'ಯಾವುದು ಸೂಕ್ಷ್ಮ ಅಧಿಪತಿಯೇ. ಸಂಪೂರ್ಣ ಭೂಮಿಯನ್ನು ಮಸಣ ಮಾಡಲು ಕಾರಣನಾದ ಈ ದುರ್ಯೋಧನನ ನಡೆಗಳು ಸಹ್ಯವೇ...?'

'ಮನುಷ್ಯನ ಕ್ರಿಯೆ ಮತ್ತು ಕರ್ಮಗಳ ಫಲಕ್ಕೆ ಸಂಪೂರ್ಣ ಭಾರತ ದುರ್ಯೋಧನನ್ನು ಕಾರಣಕರ್ತನನ್ನಾಗಿಸಿತು ಅಷ್ಟೆ. ಧರ್ಮಜನ ಹೊರತು ಸುಯೋಧನ ಯಾಕಾದರೂ ಸಹ್ಯವಲ್ಲದ ಕ್ರಿಯೆಗಿಳಿದ ಎನ್ನಿಸುತ್ತದೆ ನಿನಗೆ? ಹಾಗೆ ನೋಡಿದರೆ ಸಂಪೂರ್ಣ ಯುದ್ಧ ಅಥವಾ ನ್ಯಾಯಯುತ ನಡೆ ನಡೆಸಬಲ್ಲ ವಾಸುದೇವ ಎಲ್ಲ ಗೊತ್ತಿದ್ದೂ ಯಾಕಾದರೂ ಸುಮ್ಮನಾದ? ಅಜೇಯರಾದ ಅವನ ಸೇನಾಧಿಪತಿಗಳೆಲ್ಲ ಅವನಿಗೆ ಸಮರ್ಥ ಜೊತೆಗೊಡದೆ ಗೋಣು ಚೆಲ್ಲಿದರಲ್ಲ, ಅವೆಲ್ಲ ಸಹ್ಯ ನಡೆಗಳೇ? ಎಲ್ಲ ಗೊತ್ತಿದ್ದೂ ಸುಯೋಧನ ಸಂಪೂರ್ಣ ಜವಾಬ್ದಾರಿಗೆ ಕೊರಳೊಡ್ಡಿದನಲ್ಲ, ಅದಕಿಂತಲೂ ಮಿಗಿಲು ಯಾವ ಧರ್ಮವಿದ್ದೀತು? ಪ್ರತಿಯೊಬ್ಬರ ಕರ್ಮದ ಫಲಾನುಫಲಗಳ ನೊಗವನ್ನು ಹೊರಲು ಸಿದ್ಧನಾಗಿ ಕಾಲೂರುವುದಿದೆಯಲ್ಲ, ಅದಕ್ಕಿಂತಲೂ ದೊಡ್ಡ ಜಯ ಯಾವುದು ಧರ್ಮಜ? ಹಾಗೆ ಏನಾಗುತ್ತದೆನ್ನುವ ಅರಿವಿದ್ದೂ ಅದಕ್ಕೆಲ್ಲ ಸಾವರಿಸಿಕೊಳ್ಳಲು ಸಾಮಾನ್ಯನಾದವನಿಂದ ಸಾಧ್ಯವೇ? ಏನೇ ಆದರೂ ಸುಯೋಧನ ಜಗತ್ತಿನ ಅತ್ಯಂತ ಧರ್ಮಿಷ್ಠ ನಡೆ ನಡೆದ ಮಾನವ ಎನ್ನುವುದನ್ನೂ ಒಪ್ಪಲೇಬೇಕು ಧರ್ಮಜ. ಇಲ್ಲದಿದ್ದರೆ ಯಾವ ಅಡ್ಡಿಆತಂಕ ಇಲ್ಲದೆ ಅವನು ಸ್ವರ್ಗಾರೋಹಣ ಮಾಡುತ್ತಿರಲಿಲ್ಲ. ನೋಡು, ನಂಬಿಕೆ ಮತ್ತು ಮಾನವೀಯತೆಗಿಂತ ಮಿಗಿಲಾದ ಧರ್ಮವಿಲ್ಲ ಯುಧಿಷ್ಠಿರ. ಹಾಗಾಗಿ ಅವನು ಕ್ರಿಯೆಗಳಿಗೆ ಪ್ರತಿಕ್ರಿಯಿಸಿದ ಎಂದೇ ಗಣಿಸುವುದಾದರೆ, ಅವನ ನಿಜಾಯಿತಿಗಿಂತಲು ಮಿಗಿಲು ಯಾವುದಿದೆ ಹೇಳು...?

ಸುಯೋಧನ ಬದುಕಿನುದ್ದಕ್ಕೂ ತಾನು ನಂಬಿದ್ದನ್ನು ಯಾವತ್ತೂ ಬಲಿಗೊಡದೆ, ತನ್ನ ಮೇಲಿನ ನಂಬಿಕೆ ಮತ್ತು ಜನರು, ಸಮಾಜ, ಕುಟುಂಬ ಇರಿಸಿದ್ದ ಭಾವಗಳಿಗೆ ಧಕ್ಕೆ ಬಾರದಂತೆ ತಾನೇ ಇದಕ್ಕೆಲ್ಲ ಬಲಿಯಾಗುತ್ತೇನೆಂದು ಗೊತ್ತಿದ್ದೂ ನೇರ ನಡೆನುಡಿ ಅನುಸರಿಸಿದ. ಅದಕ್ಕೂ ಮಿಗಿಲಾಗಿ ತನ್ನನ್ನು ನಂಬಿದವರ ಭಾವಗಳಿಗೆ ಚ್ಯುತಿ ಬರುವ ಯಾವ ಯೋಚನೆಯೂ ಅವನ ಮನಸ್ಸಿನಲ್ಲಿ ಯಾವತ್ತಿಗೂ ಬರಲೇ ಇಲ್ಲ. ಅವನೆಂದೂ ತನ್ನವರು ತನ್ನ ನಂಬಿದವರ ಭರವಸೆಗಿಂತ ಮಿಗಿಲಾದುದು ಇದೆ ಎಂದು ಬದುಕಲೇ ಇಲ್ಲ. ನಂಬಿಕೆಗೆ ಜೀವ ಕೊಟ್ಟ ದೊಡ್ಡತನ ಅವನದ್ದು.

ಕೊನೆಯ ಕ್ಷಣದಲ್ಲೂ ಸಮಬಲರೊಡನೆ ಹೋರಾಟ ಎನ್ನುವ ಅವನ ಚಿಂತನೆ ಮತ್ತು ಧರ್ಮಯುದ್ಧ ಮಾಡಿದ ಏಕೈಕ ಯೋಧ ಸುಯೋಧನ. ಅವನ ಬದುಕಿನ ರೀತಿ ನೀತಿ ನಿಜಕ್ಕೂ ಸ್ತುತ್ಯರ್ಹ. ಇತರರ ಒಳ್ಳೆಯತನ ಎದ್ದು ಕಾಣಬೇಕೆಂದರೆ ಪಕ್ಕದವನನ್ನು ಕೆಟ್ಟವನ್ನಾಗಿ ಕಾಣಿಸಬೇಕು. ಅದಕ್ಕೆ ಬಲಿಯಾದ ಜೀವ ಅವನದ್ದು. ಅವನಿಗೆ ಅಲ್ಲದೆ ಇನ್ನಾರಿಗೆ ಸ್ವರ್ಗ ಪ್ರಾಪ್ತಿಯಾದೀತು ಧರ್ಮಜ. ನೀನು ಎಲ್ಲ ತಿಳಿದವನು, ಈಗಲೂ ಇಂಥ ಮಕ್ಕಳಾಟ ಮಾಡಿದರೆ ಧರ್ಮಸೂಕ್ಷ್ಮತೆಯ ವ್ಯಾಖ್ಯಾನವೇ ಬದಲಾದಿತು. ಎಲ್ಲ ಮರೆತು ಸ್ವರ್ಗ ಪ್ರಾಪ್ತಿ ಅನುಭವಿಸು...' ಎಂದ.

ಧರ್ಮಜ ಕಾಲು ಒಳಗಿಟ್ಟ.

ಹಿಂದಿನಿಂದ ಸ್ವರ್ಗದ ಬಾಗಿಲು ಮುಚ್ಚಿಕೊಂಡಿತ್ತು.

ಪ್ರತಿಕ್ರಿಯಿಸಿ: feedback@sudha.co.in